8

# ಆತ್ಮಿಕ ಇಸ್ರಾಯೇಲ್

*"ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರ ವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯಹೊಂದಿರಲಿಲ್ಲ, ಈಗ ವಾತ್ಸಲ್ಯಹೊಂದಿದವರಾಗಿದ್ದೀರಿ" (1 ಪೇತ್ರ 2:9, 10).*

ಸ್ವಲ್ಪ ದಿನಗಳ ಹಿಂದೆ, ಹಾರ್ಡಿಂಗ್ ಯುನಿವರ್ಸಿಟಿಯಲ್ಲಿ ಹೊಸ ಒಡಂಬಡಿಕೆಯ ಸಮೀಕ್ಷೆಯ ಒಂದು ಕ್ಲಾಸಿನಲ್ಲಿ "ಕಾಲವು ಪರಿಪೂರ್ಣವಾದಾಗ" ಈ ಲೋಕದೊಳಗೆ ಕ್ರಿಸ್ತನ ಬರೋಣದ ಬಗ್ಗೆ ಮಾತನಾಡಿದೆನು. ಕೂಡಲೇ ಒಬ್ಬ ವಿದ್ಯಾರ್ಥಿಯ ಕೈ ಮೇಲಕ್ಕೆತ್ತಲ್ಪಟ್ಟಿತು, ಮತ್ತು ಒಬ್ಬ ಯುವಕನು ಕುತೂಹಲ ಆಸಕ್ತಿಯಿಂದ, "ಕಾಲವು ಪರಿಪೂರ್ಣವಾದಾಗ" ಎಂಬುದರ ಅರ್ಥವೇನು? ಎಂದು ಕೇಳಿದನು. ನಾನು ಗಲಾತ್ಯ 4:4, 5ರ ಕಡೆಗೆ ತಿರುಗಿದೆನು ಮತ್ತು ಕ್ರಿಸ್ತನ ಜನನದ ಬಗ್ಗೆ ಪೌಲನ ಮಾತುಗಳನ್ನು ಓದಿದೆನು: "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿ ಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿ ಯನ್ನು ನಮಗೆ ದೊರಕಿಸ ಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು."

ಆ "ಕಾಲವು ಪರಿಪೂರ್ಣವಾದಾಗ" ಎಂಬುದು ದೇವರು ತನ್ನ ನಿತ್ಯಜ್ಞಾನದಲ್ಲಿ ಮತ್ತು ಮುಂದಾಲೋಚನೆಯಲ್ಲಿ, ನಮ್ಮ ರಕ್ಷಕನಂತೆ ಈ ಲೋಕದೊಳಗೆ ಬರಲು ಕ್ರಿಸ್ತನಿಗಾಗಿ ಯೋಗ್ಯವಾದ ಸಮಯದಂತೆ ನೇಮಿಸಿದ್ದಾಗಿತ್ತು ಎಂದು ನಾನು ವಿವರಿಸಿದೆನು. ರಕ್ಷಕನ ಜನನದ ಹಿಂದೆ ದೈವಿಕ ಯೋಜನೆ ಮತ್ತು ಸಿದ್ಧತೆ ಇತ್ತೆಂದು ಬೇರೆ ರೀತಿಯಲ್ಲಿ ಹೇಳಬಹುದು. ಆತನ ಬರೋಣವು ನಮ್ಮ ಪರಲೋಕದ ತಂದೆಯ ಮನ್ನಿನಲ್ಲಿ ಹೊಳೆದ ಅಲ್ಪ ವಿಚಾರವಾಗಲೀ ಇಲ್ಲವೇ ದುಡುಕಿನಿಂದಾಗಲೀ ಉದ್ವೇಗ ದಿಂದಾಗಲೀ ಮಾಡಿದ ಕಾರ್ಯವಾಗಿರಲಿಲ್ಲ; ಆದರೆ, ಆತನ ಬರೋಣವು ಜಗತ್ತಿನ ಅಸ್ತಿವಾರವು ಹಾಕಲ್ಪಡುವ ಮೊದಲೇ ದೇವರ ಮನಸ್ಸಿನಲ್ಲಿ ನೀಲನಕ್ಷೆಯಾಗಿತ್ತು. ಅಗತ್ಯವಾದ ಘಟನೆಗಳು ಸಂಭವಿಸಿದಾಗ, ಈ ದೈವಿಕ ಪ್ರವೇಶಕ್ಕಾಗಿ ಈ ಜಗತ್ತು ಪಕ್ವ ವಾದಾಗ, ಯೇಸುವು ಜನಿಸಿದನು. ಚರಿತ್ರೆಯಲ್ಲಿ ಆ ಸಮಯವನ್ನು ಪೌಲನು "ಕಾಲದ ಪರಿಪೂರ್ಣತೆ" ಎಂದು ಸರಿಯಾಗಿ ಕರೆದಿದ್ದಾನೆ.

ಹಳೇ ಒಡಂಬಡಿಕೆಯ ಪೂರ್ವ ಅವಧಿಯು - ಪಿತೃಗಳ ಮತ್ತು ಮೋಶೆಯ ಸಮಯದ ಅವಧಿಗಳು - ಮೆಸ್ಸೀಯನ ಆಗಮನಕ್ಕಾಗಿ ಪ್ರಾರಂಭವನ್ನು ರೂಪಿಸಿದವು.

ಪಿತೃಗಳ ಕಾಲದಲ್ಲಿ ತನ್ನ ಸೇವಕರಾಗಿರಲು ದೇವರು ಅಬ್ರಹಾಮನನ್ನೂ ಯಾಕೋಬನನ್ನೂ ಆಯ್ದುಕೊಂಡನು. ಅವರ ಮುಖಾಂತರವಾಗಿ ತನ್ನ ಸ್ವಂತದ್ದೆಂದು ಕರೆಯುವ ಒಂದು ಜನಾಂಗವನ್ನು ಸೃಷ್ಟಿಸಲು ನಿರ್ಣಯಿಸಿಕೊಂಡನು. ಈ ಜನಾಂಗವನ್ನು "ಇಸ್ರಾಯೇಲ," ಎಂದು ಕರೆಯಲು ಆತನು ಆಯ್ಕೆಮಾಡಿಕೊಂಡನು. ಈ ಹೆಸರು ಯಾಕೋಬನಿಗೆ ಕೊಡಲ್ಪಟ್ಟಿತ್ತು. ಮೋಶೆಯ ಯುಗದಲ್ಲಿ, ದೇವರು ತಾನಾಯ್ದುಕೊಂಡ ಜನಾಂಗವನ್ನು, ಸಿನಾಯಿ ಪರ್ವತದ ಬಳಿಯಲ್ಲಿ ಮೋಶೆಯ ಮುಖಾಂತರ ಪ್ರಕಟಿಸಿದ ತನ್ನ ಧರ್ಮಶಾಸ್ತ್ರದ ಅಧೀನತೆಯಲ್ಲಿ ತಂದನು. ತನ್ನನ್ನು ಆರಾಧಿಸಲಿಕ್ಕೆ ಮತ್ತು ತನ್ನ ಪರಿಶುದ್ಧ ಜನಾಂಗದಂತೆ ಜೀವಿಸಲಿಕ್ಕೆ ಅವರಿಗೆ ಆತನು ಬೋಧಿಸಿದನು. ಆದಾಗ್ಯೂ, ಹಳೇ ಒಡಂಬಡಿಕೆಯ ಅವಧಿಯಲ್ಲಿಯ ದೇವರ ಎಲ್ಲಾ ಕೃತ್ಯಗಳು ನಿಜವಾಗಿಯೂ, "ಕಾಲವು ಪರಿಪೂರ್ಣವಾದಾಗ" ಲೋಕದೊಳಗೆ ಮೆಸ್ಸೀಯನನ್ನು ತರುವದಕ್ಕಾಗಿ ಸಿದ್ಧತೆಯ, ಮೊದಲಾಗಿ ಸಿದ್ಧಮಾಡುವ ಕಾರ್ಯಗಳಾಗಿದ್ದವು, "ಹಳೇ ಒಡಂಬಡಿಕೆಯ ಕಥೆಯು ಒಂದು ಜನಾಂಗದ ಕಥೆಯಾಗಿದೆ, ಮತ್ತು ಹೊಸ ಒಡಂಬಡಿಕೆಯ ಕಥೆಯು ಒಬ್ಬ ವ್ಯಕ್ತಿಯ ಕಥೆಯಾಗಿದೆ" ಎಂದು ಯಾರೋ ಹೇಳಿದ್ದಾರೆ.

ಹಳೇ ಒಡಂಬಡಿಕೆಯ ಕಥೆಯು ಇಸ್ರಾಯೇಲು ಜನಾಂಗದ ಕಥೆಯಾಗಿರುವದರಿಂದ ಮತ್ತು ಈ ಜನಾಂಗದ ಸೃಷ್ಟಿಯು ಜಗತ್ತಿನೊಳಗೆ ಮೆಸ್ಸೀಯನನ್ನು ತರುವುದಕ್ಕಾಗಿ ದೇವರ ಮುಂಗಡ ಕಾರ್ಯವಾಗಿದ್ದರಿಂದ, ಕರ್ತನ ಸಭೆಯನ್ನು ದೇವರ ಇಸ್ರಾಯೇಲ ಎಂದು ಪೌಲನು ಕರೆಯುವದನ್ನು ನೋಡಿ ನಾವು ಆಶ್ಚರ್ಯ ಪಡಬಾರದು: "ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಆಗಲಿ" (ಗಲಾತ್ಯ 6:16). ಪೌಲನು ಸಭೆಯನ್ನು ಸಾಂಕೇತಿಕವಾಗಿ ಪುರಾತನ ಇಸ್ರಾಯೇಲಿನೊಂದಿಗೆ ದೇವರ ಒಡಂಬಡಿಕೆಯ ಸಂಬಂಧದಿಂದ ತೆಗೆದುಕೊಂಡ ಮಾತುಗಳಿಂದ ಚಿತ್ರಿಸಿದ್ದರ ಬಗ್ಗೆ ನಾವು ಆಶ್ಚರ್ಯಪಡಬಾರದು: "ನಿಜವಾದ ಸುನ್ನತಿಯವರು ಯಾರಂದರೆ - ದೇವಾರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ" (ಫಿಲಿಪ್ಪಿ 3:3). "ಇಸ್ರಾಯೇಲ"ನಂತೆ ಸಭೆಯ ಈ ವರ್ಣನೆಯು ಉನ್ನತವಾಗಿ ನಮಗೆ ಮಹತ್ವವುಳ್ಳದ್ದಾಗಿದೆ, ಯಾಕಂದರೆ ಕ್ರೈಸ್ತರು ಇಂದು ಆತ್ಮಿಕ ಇಸ್ರಾಯೇಲ ಮತ್ತು ಪುರಾತನ ಇಸ್ರಾಯೇಲು ಇದ್ದಂತೆ ದೇವರ ಸ್ವಂತ ಸ್ವಾಸ್ತ್ಯವಾಗಿ ಪ್ರತ್ಯೇಕಿಸಲ್ಪಟ್ಟವರು ಎಂದು ಅದು ನಮಗೆ ಹೇಳುತ್ತದೆ!

ಹೊಸ ಒಡಂಬಡಿಕೆಯಲ್ಲಿ ಸಭೆಯು ಹೊಸ ಒಡಂಬಡಿಕೆಯ ಇಸ್ರಾಯೇಲ ಆಗಿದೆ ಎಂಬ ಅತೀ ಸಂಕ್ಷಿಪ್ತ ದೃಢ ಸೂಚನೆಯು 1 ಪೇತ್ರ 2:9, 10 ಆಗಿದೆ. 1 ಪೇತ್ರ 1:22-2:10ರಲ್ಲಿ ಒಬ್ಬನು ಕ್ರೈಸ್ತನಾಗಿರುವುದರ ಅರ್ಥವೇನೆಂಬುದನ್ನು ಪೇತ್ರನು ವಿವರಿಸಿದಂತೆ ಕ್ರೈಸ್ತನ ಮಾರ್ಪಡುವಿಕೆ (1:22-25), ನಡತೆ (2:2, 3) ಮತ್ತು ಕರೆಯುವಿಕೆಗೆ (2:4-10), ಸಂಬಂಧಿಸಿ ಉಲ್ಲೇಖಿಸಿದ್ದಾನೆ. ಕ್ರೈಸ್ತರು ದೇವರು ಆಯ್ದುಕೊಂಡ ಜನಾಂಗ, ಆತನ ನಿಜವಾದ ಇಸ್ರಾಯೇಲ ಎಂಬ ಸತ್ಯದಲ್ಲಿ ಆನಂದಿಸಲು ತನ್ನ ವಾಚಕರನ್ನು ಕೇಳಿಕೊಳ್ಳುವದರಿಂದ ಮುಕ್ತಾಯಗೊಳಿಸುತ್ತಾನೆ.

1 ಪೇತ್ರ 2:9, 10ರಲ್ಲಿ ಪೇತ್ರನು ಕ್ರೈಸ್ತರನ್ನು ದೇವರ ಇಸ್ರಾಯೇಲಿನಂತೆ ಉಲ್ಲೇಖಿಸಿದ್ದರ ಮೇಲೆ ಕೇಂದ್ರೀಕರಿಸಿರಿ. ಈ ಹೋಲಿಕೆಯು ದೇವರೊಂದಿಗಿನ ನಮ್ಮ ವಿಶೇಷ ಸಂಬಂಧವನ್ನು ಮತ್ತು ದೇವರಿಂದ ನಮ್ಮ ವಿಶೇಷ ಕರೆಯನ್ನು ದೃಢಪಡಿಸುತ್ತದೆ; ಕ್ರಿಸ್ತನಲ್ಲಿ ನಮಗೆ ಕೊಡಲ್ಪಟ್ಟ ಆತ್ಮಿಕ ಆಶೀರ್ವಾದಗಳಲ್ಲಿ ಆನಂದಿಸಲಿಕ್ಕೆ ಅದು ನಮಗೆ ಕಾರಣಗಳನ್ನು ಕೊಡುತ್ತದೆ. ಈ ವಚನಗಳು ನಾವು ಆತ್ಮಿಕ ಇಸ್ರಾಯೇಲು ಆಗಿದ್ದೇವೆ ಎಂಬುದನ್ನು

ಬೋಧಿಸುತ್ತವೆ.

## ಒಂದು ಆಯ್ದುಕೊಂಡ ಜನಾಂಗ

ಸಭೆಯನ್ನು ಆತ್ಮಿಕ ಇಸ್ರಾಯೇಲಿನಂತೆ ವಿವರಿಸುವಲ್ಲಿ, ಪೇತ್ರನು ಕ್ರೈಸ್ತರು "ಒಂದು ಆಯ್ದುಕೊಂಡ ಜನಾಂಗ" ಎಂದು ಮೊದಲು ಹೇಳಿದನು (1 ಪೇತ್ರ 2:9). ಅವರು ಆಯ್ಕೆ ಮಾಡಲ್ಪಟ್ಟರು, ಆಯ್ದುಕೊಳ್ಳಲ್ಪಟ್ಟರು ಮತ್ತು ಪ್ರತ್ಯೇಕಿಸಲ್ಪಟ್ಟರು. ಅವರು ದೇವರ ದೈವಿಕವಾಗಿ ಆಯ್ಕೆಮಾಡಲ್ಪಟ್ಟ ಜನಾಂಗದ ಜನರು, ಭೂಲೋಕದ ಎಲ್ಲಾ ಜನರೊಳಗಿಂದ ಹೊರಗೆ ಕರೆಯಲ್ಪಟ್ಟವರು.

ದೇವರು ಸಿನಾಯಿ ಪರ್ವತದ ಬಳಿಯಲ್ಲಿ ಮೋಶೆಯ ಮುಖಾಂತರ, ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು, "ಯಾಕಂದರೆ ನೀವು ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನರಾಗಿದ್ದೀರಲ್ಲವೇ; ಆತನು ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನವಾಗುವದಕ್ಕೆ ಆದುಕೊಂಡನು" (ಧರ್ಮೋಪದೇಶಕಾಂಡ 7:6), ಪುನಃ, ಆತನು ಇಸ್ರಾಯೇಲಿನ ಬಗ್ಗೆ ಹೀಗೆ ಹೇಳಿದನು, "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ" (ವಿಮೋಚನಕಾಂಡ 19:5).

ಹೀಗಿದ್ದರೂ, ಮಾನವ ಚರಿತ್ರೆಯ ಕೊನೆಯ ಯುಗದಲ್ಲಿ, ಕ್ರೈಸ್ತರು, ಮಾನವ ಇಸ್ರಾಯೇಲ್ಯರಲ್ಲ, ದೇವರ ಆಯ್ದುಕೊಂಡ ಜನಾಂಗವಾಗಿರುವರು. ಹಳೆಯ ಇಸ್ರಾಯೇಲು ನಡಿಸಲ್ಪಟ್ಟಿತು, ಅಸ್ತಿವಾರವನ್ನು ರೂಪಿಸಿತು ಮತ್ತು ನೂತನ ಇಸ್ರಾಯೇಲಿನಲ್ಲಿ, ಸಭೆಯಲ್ಲಿ ನೆರವೇರುವಿಕೆಯನ್ನು ಕೊಂಡುಕೊಂಡಿತು. ಕ್ರಿಸ್ತನನ್ನು ಪ್ರವೇಶಿಸುವ ಎಲ್ಲರೂ ಆತನು ಆಯ್ದುಕೊಂಡ ಜನರ ಜನಾಂಗವು ದೇವರ ಪೂರ್ವಸಂಕಲ್ಪದ ಆಯ್ಕೆ ಎಂದು ಪೌಲನು ಹೇಳಿದ್ದಾನೆ:

> ಹೇಗಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು ... ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು ... ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರು ನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿ ಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡಿಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು (ಎಫೆಸ 1:4, 5, 11).

ನಮ್ಮೆಲ್ಲರಿಗೂ ಬಿಡಲ್ಪಟ್ಟ, ತಿರಸ್ಕರಿಸಲ್ಪಟ್ಟ, ಇಲ್ಲವೇ ಅಲಕ್ಷಿಸಲ್ಪಟ್ಟ ನಿರಾಶೆಯ ಅನುಭವವು ಇರುವುದು. ಇತರರು ನೇಮಿಸಲ್ಪಟ್ಟಿದ್ದನ್ನು ಇಲ್ಲವೇ ಆಯ್ಕೆಮಾಡಲ್ಪಟ್ಟಿದ್ದನ್ನು, ಅದೇ ಸಮಯದಲ್ಲಿ ನಾವು ಕಡೆಯವರೆಗೆ ಸಂಪೂರ್ಣವಾಗಿ ಅಲಕ್ಷಿಸಲ್ಪಟ್ಟಿದ್ದನ್ನೂ ಅಥವಾ ಬಿಡಲ್ಪಟ್ಟಿದ್ದನ್ನೂ ನಾವು ಅನುಭವಿಸಿದ್ದೇವೆ. ನಮ್ಮಲ್ಲಿ ಕೆಲವರು, ಆಟಕ್ಕಾಗಿ ಗುಂಪುಗಳು ಆಯ್ಕೆ ಮಾಡಲ್ಪಟ್ಟಾಗ ಮಕ್ಕಳು ನಿರಾಶರಾಗುವಂತೆ ಈ ನಿರಾಶೆಯಲ್ಲಿ ದಾಟಿಹೋಗಿದ್ದೇವೆ; ನಮಗಿಂತ ಮೊದಲು ಇತರರು ಆಯ್ಕೆಮಾಡಲ್ಪಟ್ಟರು ಇಲ್ಲವೇ ನಾವು

ಸಂಪೂರ್ಣವಾಗಿ ಬಿಡಲ್ಪಟ್ಟೆವು; ಕೃಪಾಂಕ ಪಡೆದು ಆಯ್ಕೆಯಾಗಬಹುದಾದ್ದನ್ನು ನಿರೀಕ್ಷಿಸಿದೆವು. ನಮ್ಮಲ್ಲಿ ಕೆಲವರು ಯಾದಿಯು ಓದಲ್ಪಡುವಂತೆ ಗೌರವಾನ್ವಿತರು ಯಾದಿಯಲ್ಲಿ ಮೊದಲು ಹೆಸರು ಪಡೆಯುವದರೊಂದಿಗೆ, ಉಳಿದವರು ಕಾದುಕೊಂಡಿರುವ ರೀತಿಯಲ್ಲಿ ಜೀವಿಸಿದ್ದೇವೆ. ನಿರೀಕ್ಷೆಯಿಂದ ಆಲಿಸಿದೆವು. ನಮ್ಮ ಹೆಸರುಗಳು ಕೊನೆಯಲ್ಲಿ, ತಪ್ಪು ಉಚ್ಚರದಿಂದ ಓದಲ್ಪಟ್ಟಿದ್ದನ್ನು ಕೇಳುವದಾಗಿತ್ತು. ಇಂಥ ಘಟನೆಗಳು ನಮ್ಮನ್ನು ಕುಗ್ಗಿಸುತ್ತವೆ ಮತ್ತು ಬಹಳ ಸಮಯದವರೆಗೆ ಭಯಾನಕವಾದ ಸಮರ್ಪಣೆಗಳಂತೆ, ನಮ್ಮ ಸ್ವಂತ ಸ್ವರೂಪವನ್ನು ಜಜ್ಜುತ್ತ ಮತ್ತು ನಾವು "ಏನೂ ಅಲ್ಲ" ಎಂದು ಮನವೊಲಿಸುವಂತೆ ನಮ್ಮೊಂದಿಗಿರುತ್ತವೆ. ಈ ಅಪ್ರೀಯವಾದ ಸಂದರ್ಭಗಳು ಮನೋರೋಗ ತಜ್ಞನ ಬಳಿಗೆ ಬಂದ ನಿರ್ಭಾಗ್ಯ ಮನುಷ್ಯನು ಅಲ್ಪವಾಗಿ ನಡಿಸಲ್ಪಟ್ಟಂತೆಯೇ ನಮ್ಮನ್ನು ನಡಿಸುತ್ತವೆ, ಅವನು ಬಂದು "ಡಾಕ್ಟರರೇ, ಕೀಳರಿಮೆಯ ಮನೋಭಾವನೆ ನನ್ನಲ್ಲಿದೆ ಮತ್ತು ಅದರ ಬಗ್ಗೆ ನಾನು ಏನು ಮಾಡಬೇಕೆಂಬುದನ್ನು ನಾನು ತಿಳಿದಿರುವದಿಲ್ಲ" ಎಂದು ಬೇಡಿಕೊಂಡನು. ಮನೋರೋಗ ತಜ್ಞನು ಹಲವಾರು ಸಲ ತನ್ನ ರೋಗಿಯನ್ನು ಪರೀಕ್ಷಿಸಿ ಅವನಿಗೆ, "ಮನುಷ್ಯನೇ, ನಿನ್ನಲ್ಲಿ ಯಾವ ಕೀಳರಿಮೆಯ ಭಾವನೆಯಿರುವದಿಲ್ಲ; ನೀನು ಕೇವಲ ಕೀಳು ದರ್ಜೆಯವನಾಗಿರುವಿ!" ಎಂದು ಹೇಳಿದನು.

ಜನರು ದಾಟಿ ಹೋಗುವ ಸಂದರ್ಭಗಳು ಸಾಮಾನ್ಯವಾಗಿ ಬೆಳವಣಿಗೆ ಹೊಂದುತ್ತವೆ ಯಾಕಂದರೆ ಜನರಿಗಿದ್ದ ಸಾಮರ್ಥ್ಯಗಳ ಮೇಲೆ, ಜನರು ನೋಡುವುದರ ಮೇಲೆ, ಜನರು ಎಷ್ಟು ಚುರುಕಾದವರಾಗಿದ್ದಾರೆ ಇಲ್ಲವೇ ಜನರು ಯಾವುದನ್ನು ಹೊಂದಿಕೊಂಡಿದ್ದಾರೆ ಎಂಬುದರ ಮೇಲೆ ಅತಿಶಯವಾದ ಒತ್ತು ಕೊಡಲ್ಪಟ್ಟಿರುತ್ತದೆ. ಅದರ ಪರಿಣಾಮವಾಗಿ, ಇದು ನಮಗೆ ಸಂಭವಿಸುವಾಗ, ಅದು ನಾಶನಕರವಾದದ್ದಾಗಿರುತ್ತದೆ, ಯಾಕಂದರೆ ನಾವು ಸಾಕಷ್ಟು ವರ ಹೊಂದಿದವರಲ್ಲ, ಸಾಕಷ್ಟು ಚೆನ್ನಾಗಿ ಕಾಣಿಸುವವರಾಗಿರುವದಿಲ್ಲ, ಸಾಕಷ್ಟು ಚುರುಕಾದವರಾಗಿರುವದಿಲ್ಲ ಇಲ್ಲವೇ ನಾವು ಸಾಕಷ್ಟನ್ನು ಹೊಂದಿ ಕೊಂಡಿರುವದಿಲ್ಲ ಎಂದು ನಮಗೆ ಹೇಳುತ್ತದೆ.

ಪೇತ್ರನ ಪ್ರಕಾರವಾಗಿ, ಕ್ರೈಸ್ತರು ದೇವರಾದುಕೊಂಡ ಜನಾಂಗವಾಗಿದ್ದಾರೆ. ನಾವು ಹೆಚ್ಚು ವರಹೊಂದಿದವರಾಗಿರುವದರಿಂದ ಅಲ್ಲ, ಚೆನ್ನಾಗಿ ಕಾಣುವವರೂ ಚುರುಕಾದವರೂ ಆಗಿದ್ದುದರಿಂದ ಅಲ್ಲ, ಇಲ್ಲವೇ ನಮಗೆ ಅತೀ ಹೆಚ್ಚಾದದ್ದು ಇರುವದರಿಂದ ಅಲ್ಲ, ಆದರೆ ನಾವು ದೇವರಿಂದ ಪ್ರೀತಿಸಲ್ಪಟ್ಟವರಾಗಿರುವದರಿಂದ ದೇವರ ಚಿತ್ತಕ್ಕೆ ನಂಬಿಕೆಯಲ್ಲಿಯೂ ವಿಧೇಯತೆಯಲ್ಲಿಯೂ ಉತ್ತರಕೊಟ್ಟಿದ್ದರಿಂದ ಮತ್ತು ಆತನ ಮಕ್ಕಳು, ಆತನ ಸಭೆಯಾಗಿದ್ದುದರಿಂದ, ಇದು ನಿಜವಾಗಿದೆ ಎಂದು ಅವನು ಹೇಳಿದನು. ದೇವರೊಂದಿಗೆ ನಮ್ಮ ಅಂತಸ್ತು ದೇವರ ದಯೆಯಿಂದ ಪರಿಣಾಮಗೊಂಡಿರುತ್ತದೆ, ನಮ್ಮ ಹಣದಿಂದ ಅಲ್ಲ ಇಲ್ಲವೇ ಮಾನವ ಅರ್ಹತೆಯಿಂದ ಅಲ್ಲ. "... ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ" (1 ಪೇತ್ರ 2:10) ಎಂದು ಪೇತ್ರನು ಹೇಳಿದನು. "ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪರಿಶುದ್ಧಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು" (ತೀತ 3:5) ಎಂದು ಪೌಲನು ತೀತನಿಗೆ ಹೇಳಿದನು. ಕ್ರಿಸ್ತನಲ್ಲಿ ನಮ್ಮ ಬಾಪ್ತಿಸ್ಮದಲ್ಲಿ, ನಾವು ದೇವರ ದಯೆಯನ್ನು ಹೊಂದಿದೆವು ಮತ್ತು ಆತನು ಆಯ್ದುಕೊಂಡ ಜನಾಂಗದ ಭಾಗವಾದೆವು.

ಇಂದು ನಾವು ದೇವರ ಇಸ್ರಾಯೇಲ್ ಆಗಿರುವುದು ಬಲವಾದ ಸತ್ಯವಾಗಿದೆ - ವಿರೋಧಿಸುವ ಪರಿಸ್ಥಿತಿಗಳು ಮತ್ತು ಸ್ನೇಹಭಾವವಿಲ್ಲದ ಜಗತ್ತು ನಮ್ಮಿಂದ ತೆಗೆದುಕೊಳ್ಳ

ದಂಥ ನಿರೀಕ್ಷೆ ಹಾಗೂ ಭರವಸೆಯೊಂದಿಗೆ ನಮ್ಮನ್ನು ತುಂಬಿಸಿ ಬಲಪಡಿಸುವಷ್ಟು ಶಕ್ತಿಯುಳ್ಳದ್ದಾಗಿದೆ. ಉದಾಹರಣೆಗಾಗಿ, ದೇವರಿಗೆ ಪ್ರಾರ್ಥನೆಯಲ್ಲಿ ಭರವಸೆಯಿಂದಲೂ ಧೈರ್ಯದಿಂದಲೂ ಅದು ನಮ್ಮನ್ನು ತುಂಬಿಸುತ್ತದೆ. ಯಾವುದೇ ಅಗತ್ಯತೆಯ ಸಮಯದಲ್ಲಿ ಇಲ್ಲವೇ ಆತನ ಸ್ತೋತ್ರ ಮಾಡಿ, ಆತನಿಗೆ ಉಪಕಾರ ಸಲ್ಲಿಸಲು ನಾವು ಬಯಸುವಾಗ, ಭರವಸೆಯಿಂದ ಆತನ ಸಿಂಹಾಸನದ ಬಳಿಗೆ ಬರಬಹುದು. ದೇವರ ಬಲದಲ್ಲಿ ಜೀವಿಸಲು ಅದು ನಮ್ಮನ್ನು ಪ್ರೇರೇಪಿಸುತ್ತದೆ ಯಾಕಂದರೆ ದೇವರ ಆಯ್ದುಕೊಂಡ ಜನಾಂಗವಾಗಿರುವಂಥದ್ದು, ಆತ್ಮಿಕ ಆಶೀರ್ವಾದಗಳ ದೇವರ ಉಗ್ರಾಣವು ನಮಗೆ ಎಂದೂ ಮುಚ್ಚಲ್ಪಟ್ಟಿರುವದಿಲ್ಲ ಎಂಬುದನ್ನು ಅನ್ವಯಿಸುತ್ತದೆ (ಎಫೆಸ 2:18).

ನಾವು ಆತನ ಆಯ್ದುಕೊಂಡ ಜನಾಂಗವಾಗಿರುವದರಿಂದ ಆನಂದಿಸೋಣ!

## ಒಂದು ರಾಜವಂಶಸ್ಥ ಯಾಜಕತ್ವ

ಎರಡನೆಯದಾಗಿ, ಸಭೆಯು "ರಾಜ ವಂಶಸ್ಥ ಯಾಜಕತ್ವವಾಗಿದೆ" ಎಂದು ಪೇತ್ರನು ಹೇಳಿದನು (1 ಪೇತ್ರ 2:9). ಕ್ರೈಸ್ತರು ಇಂದು ದೇವರ ಯಾಜಕರಾಗಿದ್ದಾರೆ. ಒಂದೇ ದೇಹದಂತೆ, ಯಾಜಕರ ರಾಜ್ಯವಾಗಿ ರಚಿಸಲ್ಪಟ್ಟಿದ್ದಾರೆ.

ಹಳೇ ಒಡಂಬಡಿಕೆಯ ಸಮಯಗಳಲ್ಲಿ, ದೇವರು ಲೇವಿಗೋತ್ರದ ಯಾಜಕರ ಮುಖಾಂತರ ತನ್ನೊಂದಿಗೆ ತನ್ನ ಜನಾಂಗದ ಸಂಪರ್ಕವನ್ನು ಒದಗಿಸಿದನು. ಅಬ್ರಾಮ ಕುಟುಂಬದಿಂದ, ಲೇವಿಗೋತ್ರದಿಂದ ಯಾಜಕರು ಬರುವದನ್ನು ಆತನು ಆಯ್ದುಕೊಂಡನು. ಅವರು ಆತನಿಗೆ ಜನರ ಯಜ್ಞಗಳನ್ನು ಅರ್ಪಿಸಿದರು, ಮತ್ತು ಮೋಶೆಯ ಧರ್ಮಶಾಸ್ತ್ರದಿಂದ ನೇಮಿಸಲ್ಪಟ್ಟ ಎಲ್ಲಾ ಮಾರ್ಗಗಳಿಂದ ಅವರು ಇಸ್ರಾಯೇಲ್ಯರನ್ನು ಆರಾಧನೆಯಲ್ಲಿ ನಡಿಸಿದರು.

"... ನಾನೇ ನಿನಗೆ ಪಾಲಾಗಿಯೂ ಸ್ವಾಸ್ತ್ಯವಾಗಿಯೂ ಇದ್ದೇನೆ ..." ಎಂದು ದೇವರು ಲೇವಿಗೋತ್ರದವರಿಗೆ ಹೇಳಿದನು (ಅರಣ್ಯಕಾಂಡ 18:20). ಲೇವಿಯರಿಗೆ ಆರಾಧನೆಯಲ್ಲಿ, ಸೇವೆಯಲ್ಲಿ ಮತ್ತು ಜೀವನದಲ್ಲಿ ದೇವರಿಗೆ ಅದ್ವಿತೀಯವಾಗಿ ಸೇವೆ ಮಾಡುವ ಗೌರವವು ಕೊಡಲ್ಪಟ್ಟಿತು. ದೇವರನ್ನು ಸಂಪರ್ಕಿಸುವುದು ಮತ್ತು ಆತನೊಂದಿಗೆ ನಿಕಟ ಸಂಬಂಧದಲ್ಲಿರುವುದು ಕೊಡಲ್ಪಟ್ಟಿತು.

ಲೇವಿಯ ಯಾಜಕತ್ವವು ಇನ್ನು ಪರಿಣಾಮಕಾರಿಯಾಗಿರುವದಿಲ್ಲ, ಆದರೆ ನೂತನ ಯಾಜಕತ್ವವು ಕರ್ತನಿಂದ ಆಯ್ದುಕೊಳ್ಳಲ್ಪಟ್ಟಿದೆ ಎಂದು ಪೇತ್ರನು 1 ಪೇತ್ರ 2:9ರಲ್ಲಿ ಹೇಳಿದ್ದಾನೆ. ಕ್ರಿಸ್ತನ ವಿಮೋಚನಾ ಕಾರ್ಯದ ಮೂಲಕವಾಗಿ, ಆತನು ತನ್ನ ಸಭೆಯನ್ನು ತನ್ನ ಕ್ರೈಸ್ತ ಯುಗದ ಯಾಜಕತ್ವವನ್ನಾಗಿ ನೇಮಿಸಿದ್ದಾನೆ.

ದೇವರು ತನ್ನ ಸಭೆಯನ್ನು ಒಂದು ಯಾಜಕತ್ವ ಎಂದು ಕರೆದದ್ದಲ್ಲದೇ; ಅದನ್ನು "ರಾಜವಂಶಸ್ಥರಾದ" ಯಾಜಕತ್ವವೆಂದು ಕರೆದಿದ್ದಾನೆ. ಸಭೆಯು ಯಾಜಕರ ಇಲ್ಲವೇ ರಾಜವಂಶಸ್ಥ ಯಾಜಕರ ರಾಜ್ಯವಾಗಿದೆ. ಹಿಂಸಿಸಲ್ಪಡುತ್ತಿದ್ದ ಕ್ರೈಸ್ತರಿಗೆ ಯೋಹಾನನು ಪಾತ್ಮೋಸಿನಿಂದ, "... ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನು ..." (ಪ್ರಕಟನೆ 1:6) ಎಂದು ಬರೆದನು. "ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪರಿಶುದ್ಧ ಯಾಜಕವರ್ಗದವರಾಗಿದ್ದೀರಿ" (1 ಪೇತ್ರ

2:5) ಎಂದೂ ಪೇತ್ರನು ಹೇಳಿದನು. ಪರಿಶುದ್ಧಾತ್ಮನ ಸಹಾಯದ ಮೂಲಕವಾಗಿ (ರೋಮಾಪುರ 8:27) ಮತ್ತು ನಮ್ಮ ಮಧ್ಯಸ್ಥನೂ ಅತೀ ದೊಡ್ಡ ಮಹಾಯಾಜಕನೂ ಆದ ಯೇಸುವಿನ ಪ್ರಾರ್ಥನೆ ವಿಜ್ಞಾಪನೆಯ ಕಾರ್ಯದ ಮೂಲಕವೂ (1 ತಿಮೊಥೆ 2:5; ಇಬ್ರಿಯ 7:26, 27) ಕ್ರೈಸ್ತರು ನೇರವಾಗಿ ದೇವರ ಬಳಿಗೆ ಹೋಗಬಹುದು. ಯೇಸು ಕ್ರಿಸ್ತನನ್ನು ಬಿಟ್ಟು ಬೇರೆ ಯಾವ ಮಾಧ್ಯಮದ ಮುಖಾಂತರ ಕ್ರೈಸ್ತನು ದೇವರ ಬಳಿಗೆ ಹೋಗಲಾರನು. ಅವನು ದೇವರ ಮುಂದೆ ದೇವರ ಯಾಜಕನಂತೆ ನಿಂತುಕೊಳ್ಳ ಬಹುದು ಮತ್ತು ಅಭಿಷಿಕ್ತ ಮಾನವ ಯಾಜಕರ, ಸತ್ತುಹೋದ ನಂತರ, ಇಲ್ಲವೇ ದೇವದೂತರ ಸಹಾಯವಿಲ್ಲದೇ ಯೇಸುಕ್ರಿಸ್ತನ ಮುಖಾಂತರ ತನ್ನ ಬಿನ್ನಹವನ್ನು ಮಾಡಬಹುದು.

ಲ್ಯಾಟಿನ್‌ದಲ್ಲಿ "ಯಾಜಕ" ಪದದ ಮಾತು "ಸೇತುವೆ ಕಟ್ಟುವವ" ಎಂದರ್ಥ ಕೊಡುತ್ತದೆ. ಸೇತುವೆಯ ವಿಚಾರವು ಹಳೇ ಒಡಂಬಡಿಕೆಯ ಕಾಲದಲ್ಲಿಯ ಒಬ್ಬ ಯಾಜಕನ ಪಾತ್ರವನ್ನು ಉದಾಹರಿಸುತ್ತದೆ. ಯಾಜಕನು ದೇವರು ಮತ್ತು ಮನುಷ್ಯನ ಮಧ್ಯದಲ್ಲಿ ಒಂದು ರೀತಿಯ ಆತ್ಮಿಕ ಸೇತುವೆಯಾಗಿದ್ದನು. ಅವನು ದೇವರ ಚಿತ್ತವನ್ನು ಮನುಷ್ಯನಿಗೆ ತಂದನು, ಮತ್ತು ಮನುಷ್ಯನ ಬಿನ್ನಹಗಳನ್ನು ದೇವರಿಗೆ ಅರ್ಪಿಸಿದನು. ದೇವರು ಯಾಜಕನ ಮುಖಾಂತರ ಜನರ ಬಳಿಗೆ ಹೋದನು, ಮತ್ತು ಜನರು ಯಾಜಕನ ಮುಖಾಂತರ ದೇವರ ಬಳಿಗೆ ಹೋದರು. ಕ್ರೈಸ್ತ ಯುಗದಲ್ಲಿ ಅದು ಎಷ್ಟೋ ಭಿನ್ನವಾದದ್ದಾಗಿದೆಯಲ್ಲವೇ! ಒಬ್ಬನು ಕ್ರೈಸ್ತನಾಗುವಾಗ, ಕ್ರಿಸ್ತನೊಳಗೆ ಅವನ ಪ್ರವೇಶದ ಸಮಯದಲ್ಲಿ, ಅವನು ದೇವರ ಯಾಜಕನಾಗುತ್ತಾನೆ.

ದೇವರ ಯಾಜಕರಂತೆ ನಮ್ಮ ಸ್ಥಾನವು ಯೇಸುವಿನ ಕಾರ್ಯಕ್ಕೆ ಪ್ರತಿಷ್ಠಿಸಿ ಕೊಳ್ಳಲು ಮತ್ತು ಆತನ ಅನ್ಯೋನ್ಯತೆಯಲ್ಲಿ ಜೀವಿಸಲಿಕ್ಕೆ ಆತನು ನಮಗೆ ಈ ಪರಿಶುದ್ಧ ಸ್ಥಾನವನ್ನು ಉಪಯೋಗಿಸಲು ನಮ್ಮನ್ನು ಒತ್ತಾಯಿಸಬೇಕು. ದೇವರ ಯಾಜಕತ್ವದಂತೆ, ದೇವರ ಮುಂದೆ ಉನ್ನತ ಅವಕಾಶದ ಸ್ಥಾನವಿರುವುದು.

ನಾವು "ರಾಜವಂಶಸ್ಥ ಯಾಜಕರಾಗಿರುವದರಿಂದ" ಆನಂದಿಸೋಣ!

## ಒಂದು ಪರಿಶುದ್ಧ ಜನಾಂಗ

ಮೂರನೆಯದಾಗಿ, ಕ್ರಿಸ್ತನ ಸಭೆಯು "ಒಂದು ಪರಿಶುದ್ಧ ಜನಾಂಗ"ವಾಗಿದೆ ಎಂದು ಪೇತ್ರನು ಹೇಳಿದನು (1 ಪೇತ್ರ 2:9). ಸಾಂಕೇತಿಕವಾಗಿ ಮಾತಾಡಿದರೆ, ಸಭೆಯು ದೇವರಾದುಕೊಂಡ ಜನಾಂಗ, ದೇವರ ಸ್ವಕೀಯ ಪ್ರಜೆಯಾಗಿರುತ್ತದೆ.

ಇಸ್ರಾಯೇಲು ದೇವರಾದುಕೊಂಡ ಜನಾಂಗದಂತೆ, ಪರಿಶುದ್ಧತೆಗಾಗಿ ಕರೆಯಲ್ಪಟ್ಟಿತು, ಮೋಶೆಯ ಮುಖಾಂತರ, ದೇವರು ಇಸ್ರಾಯೇಲಿಗೆ, "ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" ಎಂದು ಹೇಳಿದನು (ಯಾಜಕಕಾಂಡ 19:2). ಇದಲ್ಲದೇ ಆತನು ಅವರಿಗೆ, "ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ" ಎಂದು ಹೇಳಿದನು (ವಿಮೋಚನಕಾಂಡ 19:6). ಮನಸ್ಸಿನಲ್ಲಿ, ಪರಿಶುದ್ಧತೆಗೆ ಇಸ್ರಾಯೇಲ್ಯರಿಗೆ ಈ ಕರೆಯೊಂದಿಗೆ, ಮತ್ತು ಯಾಜಕಕಾಂಡ 19:2ರಿಂದ ಬಹುಶಃ ಉಲ್ಲೇಖಿಸುವದರಿಂದ, ಪೇತ್ರನು ತನ್ನ ಪತ್ರದ ವಾಚಕರಿಗೆ ಹೀಗೆ ಹೇಳಿದನು, "ನಿಮ್ಮನ್ನು ಕರೆದಾತನು ಪರಿಶುದ್ಧ ನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು

ಎಂದು ಬರೆದದೆಯಲ್ಲಾ" (1 ಪೇತ್ರ 1:15, 16).

ಕ್ರೈಸ್ತರು, ದೇವರ ಜನಾಂಗದ ಜನರು ದೇವರಂತಾಗಿರುವವರಾಗಿರಬೇಕು. ಆತನು ಪರಿಶುದ್ಧನು, ಮತ್ತು ನಾವು ಪರಿಶುದ್ಧರಾಗಿರಬೇಕು, ಪ್ರೀತಿಯ ಮಕ್ಕಳಂತೆ ಆತನನ್ನು ಅನುಕರಿಸಬೇಕು, ಮತ್ತು ನಮ್ಮ ವ್ಯಕ್ತಿತ್ವಗಳಲ್ಲಿಯೂ ಕೃತ್ಯಗಳಲ್ಲಿಯೂ ನಮ್ಮ ತಂದೆಯ ಹೋಲಿಕೆಯನ್ನು ಪುನರುತ್ಪತ್ತಿ ಮಾಡಬೇಕು (ಎಫೆಸ 5:1, 2).

"ಪರಿಶುದ್ಧ" ಎಂಬ ಪದವು "ಪರಿಶುದ್ಧ ಉಪಯೋಗಕ್ಕಾಗಿ ಪ್ರತ್ಯೇಕಿಸಿ ಇಡು" ಎಂದರ್ಥ ಕೊಡುತ್ತದೆ. ಕ್ರೈಸ್ತರಿಗೆ ಅನ್ವಯಿಸಿ, ಈ ಪದವು ದೇವರ ಜನರು ವಿಭಾಗವಿಲ್ಲದ ಭಕ್ತಿಗಾಗಿ ಮತ್ತು ಆತನ ಸೇವೆಮಾಡುವದಕ್ಕಾಗಿ ಪ್ರತ್ಯೇಕಿಸಲ್ಪಟ್ಟಿದ್ದಾರೆ ಎಂದು ಅರ್ಥ ಕೊಡುತ್ತದೆ.

ಕ್ರೈಸ್ತನಿಗೆ ಎರಡು ದೇಶಗಳಲ್ಲಿ ನಾಗರಿಕತ್ವವಿರುವುದು - ಒಂದು ಅವನು *ವಾಸಿಸುತ್ತಿರುವದರಲ್ಲಿ* ಮತ್ತು ಇನ್ನೊಂದು ಅವನು *ದೃಢ ನಿಷ್ಠೆಯಿಂದ* ಇರುವಂಥದ್ದಕ್ಕೆ ಭೂಲೋಕದ ನಾಗರಿಕನಾಗಿ ಅವನು ಈ ಜಗತ್ತಿನಲ್ಲಿ ಜೀವಿಸುತ್ತಾನೆ, ಆದರೆ ಅವನನ್ನು ಆಳಿನಡಿಸುವ ನಾಗರಿಕತ್ವವು ದೇವರ ದೇಶದಲ್ಲಿ ಆತ್ಮಿಕವಾದ, ಪರಲೋಕದ ರಾಜ್ಯದಲ್ಲಿ ಇರುವುದು. "ನಾವಾದರೋ ಪರಲೋಕ ಸಂಸ್ಥಾನದವರು; ಕರ್ತನಾದ ಯೇಸುಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ" (ಫಿಲಿಪ್ಪಿ 3:20) ಎಂದು ಪೌಲನು ಬರೆದನು.

ಒಬ್ಬ ಕ್ರೈಸ್ತನು ತಾನು ದೇವರ ಪರಿಶುದ್ಧ ಜನಾಂಗದ ಪ್ರಜೆಯಾಗಿ ಹೇಗೆ ಇರುವೆನೆಂಬುದನ್ನು ಯೋಚಿಸುವಂತೆ, ಅವನು ಕೂಡಲೇ ಆದರಿಸಲ್ಪಡುವನು ಮತ್ತು ಆಹ್ವಾನಿಸಲ್ಪಡುವನು - ದೇವರೊಂದಿಗೆ ತನ್ನ ಸಂಬಂಧದಿಂದ ಆದರಿಸಲ್ಪಡುವನು ಮತ್ತು ಈ ಸಂಬಂಧವು ಅನ್ವಯಿಸುವ ಪರಲೋಕದ ಕರೆಯಿಂದ ಆಹ್ವಾನಿಸಲ್ಪಡುವನು. ಭೂಲೋಕದಲ್ಲಿಯ ನಮ್ಮ ನಡತೆಯು ಎಲ್ಲಾ ಸಮಯಗಳಲ್ಲಿ ಪರಲೋಕದಲ್ಲಿಯ ನಮ್ಮ ನಾಗರಿಕತ್ವವನ್ನು ಪ್ರತಿಬಿಂಬಿಸಬೇಕೆಂದು ಪೇತ್ರನು ಹೇಳಿದನು. ಪರಿಶುದ್ಧತೆಯು ಕ್ರೈಸ್ತನ ಜೀವಿತದ ಪ್ರತಿಯೊಂದು ವಿಷಯಕ್ಕೆ ವಿಸ್ತರಿಸಲ್ಪಡತಕ್ಕದ್ದು. "... ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ 1:15) ಎಂದು ಪೇತ್ರನು ಹೇಳಿದನು. ನಾವು ಮಾಡುವಂಥದ್ದು, ಯೋಚಿಸುವಂಥದ್ದು, ಮತ್ತು ಹೇಳುವಂಥದ್ದು ನಾವು ಯಾರಾಗಿದ್ದೇವೆಂಬುದನ್ನು ಪ್ರತಿಬಿಂಬಿಸತಕ್ಕದ್ದು.

ಒಬ್ಬ ತಾಯಿಯು ತನ್ನ ಮಕ್ಕಳಿಗೆ ಅವರನ್ನು ಶಾಲೆಗೆ ಇಲ್ಲವೇ ಸ್ವಲ್ಪ ಸಮಯ ಆಕೆಯಿಂದ ಅವರು ಬೇರೆಯಾಗಿರುವ ಇತರ ಕಾರ್ಯಕ್ಕೆ ಕಳುಹಿಸುವಾಗ, "ಈಗ ನೀವು ಯಾರಾಗುವಿರಿ ಎಂಬುದನ್ನು ಜ್ಞಾಪಿಸಿಕೊಳ್ಳಿರಿ" ಎಂದು ಹೇಳುತ್ತಿದ್ದಳು. ಅವರು ಏನಾಗಿರುವರು ಎಂಬುದರ ಬಗ್ಗೆ ಆಕೆಯ ಜ್ಞಾಪಿಸುವಿಕೆಯು ಆ ಸ್ವರೂಪಕ್ಕೆ ತಕ್ಕ ರೀತಿಯಲ್ಲಿ ಜೀವಿಸಲು ಅವರನ್ನು ಪ್ರೇರೇಪಿಸುವುದು ಮತ್ತು ಅವರ ಆ ನಡತೆಯು ಅವರ ನಂಬಿಕೆಗೆ ಸಾಮರಸ್ಯದಲ್ಲಿ ಇರುವುದು ಎಂದು ಆಕೆಯು ನಿರೀಕ್ಷೆಯುಳ್ಳವಳಾಗಿದ್ದಳು. ಕ್ರೈಸ್ತರು ತಾವು ಯಾರಾಗಿದ್ದೇವೆಂಬುದನ್ನು ಜ್ಞಾಪಿಸಿಕೊಂಡರೆ, ದೇವರ ಪರಿಶುದ್ಧ ಜನಾಂಗವೆಂದು ಜ್ಞಾಪಿಸಿಕೊಂಡರೆ, ಅವರು ಪರಿಶುದ್ಧ ಜೀವನ ಜೀವಿಸಲು ಒತ್ತಾಯಿಸಲ್ಪಡುವರು.

ನಾವು "ಒಂದು ಪರಿಶುದ್ಧ ಜನಾಂಗ" ಆಗಿದ್ದೇವೆ ಎಂಬುದರಲ್ಲಿ ಆನಂದಿಸೋಣ.

## ಒಂದು ಸ್ವಕೀಯ ಪ್ರಜೆ

ನಾಲ್ಕನೆಯದಾಗಿ, ಕ್ರೈಸ್ತರು "ಒಂದು ಸ್ವಕೀಯ ಪ್ರಜೆ" ಆಗಿದ್ದಾರೆಂದು ಪೇತ್ರನು ಹೇಳಿದನು (1 ಪೇತ್ರ 2:9; KJV). NASBಯಲ್ಲಿ "ದೇವರ ಸ್ವಂತ ಸ್ವಾಸ್ತ್ಯಕ್ಕಾಗಿ ಒಂದು ಜನಾಂಗ," ಎಂದು ಇದ್ದು ಅದು ಹೆಚ್ಚು ಸ್ಪಷ್ಟವಾಗಿ ಗ್ರೀಕ್ ಮಾತುಗಳನ್ನು ಭಾಷಾಂತರಿಸುತ್ತದೆ. ಕ್ರೈಸ್ತರು ದೇವರ ಸ್ವಂತ ಸೊತ್ತಾಗಿದ್ದಾರೆ ಎಂಬುದು ಒಂದು ಸಂಗತಿಯಾಗಿದೆ. ಆತನ ಸ್ವಂತ ಸ್ವಾಸ್ತ್ಯ; ಮತ್ತು, ಈ ಅರ್ಥದಲ್ಲಿ ಅವರು ಸ್ವಕೀಯರಾಗಿದ್ದಾರೆ.

ದೇವರು ಮೋಶೆಯ ಮುಖಾಂತರ ದೈಹಿಕ ಇಸ್ರಾಯೇಲ್ಯರಿಗೆ, "ಯಾಕಂದರೆ ನೀವು ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನರಾಗಿದ್ದೀರಲ್ಲವೇ; ಆತನು ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನವಾಗುವದಕ್ಕೆ ಆದುಕೊಂಡನು" (ಧರ್ಮೋಪದೇಶಕಾಂಡ 7:6). ಆತನು ಅದರಂತೆ ಅವರಿಗೆ ಹೇಳಿದನು,

> ಯೆಹೋವನೋ ನಿಮ್ಮ ವಿಷಯದಲ್ಲಿ - ಇವರು ನನ್ನ ಆಜ್ಞೆಗಳನ್ನೆಲ್ಲಾ ಅನುಸರಿಸುವ ಪಕ್ಷಕ್ಕೆ ನನ್ನ ವಾಗ್ದಾನಾನುಸಾರ ನನಗೆ ಸ್ವಕೀಯ ಜನರಾಗಿರುವರೆಂದೂ ನಾನು ನಿರ್ಮಿಸಿದ ಬೇರೆ ಎಲ್ಲಾ ಜನಾಂಗಗಳಿಗಿಂತಲೂ ಇವರಿಗೆ ಹೆಚ್ಚಾದ ಕೀರ್ತಿ ಘನ ಮಾನಗಳನ್ನುಂಟು ಮಾಡುವೆನೆಂದೂ ಇವರು ನನ್ನ ಮಾತಿನ ಮೇರೆಗೆ ತಮ್ಮ ದೇವರಾದ ಯೆಹೋವನಿಗೋಸ್ಕರ ಮೀಸಲಾದ ಜನರಾಗುವರೆಂದೂ ಒಡಂಬಟ್ಟಿದ್ದಾನೆ (ಧರ್ಮೋಪದೇಶಕಾಂಡ 26:18, 19).

ಈಗ, ಕ್ರೈಸ್ತ ಯುಗದಲ್ಲಿ, ಸಭೆಯು ದೇವರ ಸ್ವಂತ ಸೊತ್ತಾದ ಜನಾಂಗವಾಗಿದೆಯೆಂದು ಪೇತ್ರನು ಹೇಳಿದ್ದರಲ್ಲಿ, ದೇವರಿಗೆ ಒಳಗೊಂಡಿರುವ ಜನಾಂಗವಾಗಿರುವ ಸುಂದರವಾದ ತತ್ವವು ಪೇತ್ರನಿಂದ ಕ್ರಿಸ್ತನ ಸಭೆಗೆ ಅನ್ವಯಿಸಲ್ಪಟ್ಟಿದೆ. ತೀತ 2:14ರಲ್ಲಿ ಆತನು ಪೌಲನು ಈ ಮಾತಿಗೆ ಅದೇ ಅನ್ವಯಮಾಡಿ ಹೇಳಿದ್ದಾನೆ: "ಕ್ರಿಸ್ತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು."

ಕೆಲವು ವರ್ಷಗಳ ಹಿಂದೆ, ಸುವಾರ್ತಾ ಕೂಟಕ್ಕಾಗಿ ವಾಶಿಂಗ್ಟನ್ ಡಿ.ಸಿ. ಯಲ್ಲಿ ನನ್ನ ಕುಟುಂಬವು ನನ್ನೊಂದಿಗೆ ಇತ್ತು. ಆ ವಾರದಲ್ಲಿ, ಸಹೋದರರು ಆ ಪ್ರಸಿದ್ಧ ಪಟ್ಟಣದಲ್ಲಿ ಅನೇಕ ಐತಿಹಾಸಿಕ ಸ್ಥಳಗಳಿಗೆ ನಮ್ಮನ್ನು ಕರೆದುಕೊಂಡು ಹೋದರು. ಪ್ರೀತಿಯ ಪ್ರೆಸಿಡೆಂಟ್ ಅಬ್ರಹಾಮ ಲಿಂಕನ್ ಅವರು ಕೊಲೆ ಮಾಡಲ್ಪಟ್ಟ ಸ್ಥಳವನ್ನು ಸಂದರ್ಶಿಸಿದ್ದು, ಅನೇಕ ವಿಧವಾದ ಸ್ಮರಣೆಗಳಲ್ಲಿ ಒಂದಾಗಿರುತ್ತದೆ. ಮನುಷ್ಯನ ಮಹತ್ವದ ಕಾರಣದಿಂದ, ಆ ಸ್ಥಳದಿಂದ ನಾನು ಆಳವಾಗಿ ಪ್ರಭಾವಿತನಾದೆನು. ಆ ಸ್ಥಳದ ಕೆಳಗಿನ ವಸ್ತು ಸಂಗ್ರಹಾಲಯವು ಗಣನೆಗೆ ಬಾರದ, ಬೆಲೆಯಿಲ್ಲದ ವಸ್ತುಗಳು ಪ್ರಸಿದ್ಧನಾದ ವ್ಯಕ್ತಿಯವುಗಳು ಆಗುವಾಗ ಇಲ್ಲವೇ ಅಂಥವನಿಂದ ಉಪಯೋಗಿಸಲ್ಪಡುವಾಗ ಅತ್ಯದ್ಭುತವಾದ ಬೆಲೆಯುಳ್ಳವುಗಳಾಗುವವು ಎಂಬುದನ್ನು ನನ್ನ ಜ್ಞಾಪಕಕ್ಕೆ ತಂದಿತು. ಅಲ್ಪ ಬೆಲೆಯ ಪಾದರಕ್ಷೆಯು (shoe) ಗಾಜಿನ ಪೆಟ್ಟಿಗೆಯಲ್ಲಿ ಇಡಲ್ಪಟ್ಟಿದೆ ಮತ್ತು ತೀರ್ಮಾನಿಸದಷ್ಟು ಬೆಲೆಯುಳ್ಳದ್ದಾಗಿದೆ, ಯಾಕಂದರೆ ಲಿಂಕನ್‌ನು ಕೊಲ್ಲಲ್ಪಟ್ಟ ದಿನದಂದು ಅದನ್ನು ಧರಿಸಿದ್ದನು. ಅದನ್ನು ಹೊಂದಿಕೊಂಡಿದ್ದವನ ನಿಮಿತ್ತವಾಗಿ ಅಲ್ಪವಾದದ್ದು

ಬೆಲೆಕಟ್ಟಲಾಗದ ನಿಧಿಯಾಯಿತು.

ಕ್ರೈಸ್ತರಾದ ನಾವು ನಮ್ಮಷ್ಟಕ್ಕೆ ನಾವೇ ತೆಗದುಕೊಳ್ಳಲ್ಪಡುವಾಗ ಹೆಚ್ಚು ಬೆಲೆಯುಳ್ಳವರಾಗಿರಲಿಕ್ಕಿಲ್ಲ, ಆದರೆ ದೇವರ ಸ್ವಂತ ಸ್ವಾಸ್ತ್ಯವಾದ ಜನರಂತೆ ನಾವು ನೋಡಲ್ಪಡುವಾಗ, ದೇವರ ಸ್ವಂತ ಜನರಂತೆ ಇರುವಾಗ ಹಾಗೂ ದೇವರಿಂದ ಉಪಯೋಗಿಸಲ್ಪಡುವಾಗ, ನಾವು ನಿಜವಾಗಿಯೂ ಹೆಚ್ಚು ಬೆಲೆಯುಳ್ಳವರಾಗುತ್ತೇವೆ! ಭೂಲೋಕದ ಎಲ್ಲಾ ಜನರೊಳಗಿಂದ ದೇವರು ನಮ್ಮನ್ನು ತನ್ನ ಸ್ವಾಸ್ತ್ಯವನ್ನಾಗಿ ಮಾಡಿದ್ದಾನೆಂಬುದನ್ನು ಅರ್ಥಮಾಡಿಕೊಳ್ಳಲಿಕ್ಕೆ, ಅದು ನಮ್ಮ ಸ್ವಂತ ಬೆಲೆಗೆ, ನಮ್ಮ ಮೌಲ್ಯದ ಭಾವನೆಗೆ ಬಹಳವಾದದ್ದನ್ನು ಮಾಡುವುದು.

ಒಂದು ಬೊಂಬೆಯನ್ನು ಕೊಂಡುಕೊಳ್ಳಲು ಬೊಂಬೆಯ ಅಂಗಡಿಯೊಳಗೆ ಒಬ್ಬ ಬಾಲಕನು ತನ್ನ ತಾಯಿಯೊಂದಿಗೆ ಹೋಗುತ್ತಿರುವದನ್ನು ಚಿತ್ರಿಸಿಕೊಳ್ಳಿರಿ. ಮಾರಾಟಕ್ಕಿರುವ ಬೊಂಬೆಗಳನ್ನು ಅವನು ಪರೀಕ್ಷಿಸುತ್ತಾನೆ. "ಇದ್ದಂತೆಯೇ ಮಾರಲ್ಪಡುತ್ತದೆ" ಎಂದು ಬರೆದ ಚೀಟಿ ಅಂಟಿಸಿರುವ ಒಂದು ಮುರಿದ ಸೇಲ್ ದೋಣಿ ಕಡೆಗೆ ಅವನ ದೃಷ್ಟಿ ಹೋಗುತ್ತದೆ. "ಅದಿದ್ದಂತೆ" ಸೇಲ್ ದೋಣಿಗೆ ಬೆಲೆಯಿರುವದಿಲ್ಲ. ಆದರೆ ಅದು ಅವನ ಆಯ್ಕೆಯಾಗುತ್ತದೆ. ಅದಕ್ಕಾಗಿ ಹೇಳಲ್ಪಟ್ಟ ಅಲ್ಪ ಕ್ರಯವನ್ನು ಅವನು ಕೊಡುತ್ತಾನೆ. ಅವನು ಮನೆಗೆ ತಲುಪಿದ ಕೂಡಲೇ, ಅದನ್ನು ರಿಪೇರಿ ಮಾಡುತ್ತಾನೆ. ಇಲ್ಲಿ ಸ್ವಲ್ಪ ಅಂಟನ್ನು ಅಲ್ಲಿ ಸ್ವಲ್ಪ ಹೊಸ ಕಟ್ಟಿಗೆಯನ್ನು ಹಾಕಿ, ಪೂರ್ಣವಾಗಿ ಹೊಸದಾಗಿ ಬಣ್ಣ ಹಚ್ಚುತ್ತಾನೆ. ತನ್ನ ದೋಣಿಗೆ, "ನಾನು ನಿನ್ನನ್ನು ಕೊಂಡು ಕೊಂಡೆನು, ನಾನು ನಿನ್ನನ್ನು ರಿಪೇರಿ ಮಾಡಿದೆನು. ಈಗ ನಿಜವಾಗಿಯೂ ನೀನು ನನ್ನದಾಗಿದ್ದೀ" ಎಂದು ಹೇಳ ಬಹುದು. ಅದೇ ರೀತಿಯಲ್ಲಿ ಕ್ರೈಸ್ತರು ದೇವರಿಗೆ ಒಳಪಟ್ಟವರಾಗಿರುತ್ತಾರೆ. ಆತನು ನಮ್ಮನ್ನು ತನ್ನ ಕುಮಾರನ ರಕ್ತದಿಂದ ಕೊಂಡುಕೊಂಡಿದ್ದಾನೆ. ಆತನಿಗೆ ನಮ್ಮ ಮಾರ್ಪಡುವಿಕೆಯಲ್ಲಿ ನಮ್ಮನ್ನು ಪುನಃ ರಚಿಸಿದ್ದಾನೆ, ಹಾಗೂ ನಾವು ಆತನೊಂದಿಗೆ ನಡೆಯುವಂತೆ ಆತನು ಸತತವಾಗಿ ನಮ್ಮನ್ನು ಬದಲಾಯಿಸುತ್ತಾನೆ. ಈಗ ಆತನು ವಿಮೋಚನೆಯ ಆನಂದದಲ್ಲಿ, "ಇವರು ನಿಜವಾಗಿಯೂ ನನ್ನ ಸ್ವಂತ ಜನರು" ಎಂದು ಹೇಳಬಹುದು. ಕ್ರಿಸ್ತನಿಗೆ ಮಾರ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯು ದೇವರ ಸ್ವಂತ ಸ್ವಾಸ್ತ್ಯವಾದ ವ್ಯಕ್ತಿಯಾಗಿರುವ ಉನ್ನತವಾದ ಮತ್ತು ಅದ್ಭುತಕರವಾದ ಸ್ಥಿತಿಗೆ ಮೇಲಕ್ಕೇರಿಸಲ್ಪಟ್ಟಿದ್ದಾನೆ.

ನಾವು ದೇವರ "ಸ್ವಕೀಯ ಪ್ರಜೆಯಾಗಿರುವದಕ್ಕಾಗಿ" ಆನಂದಿಸೋಣ.

## ಮುಕ್ತಾಯ

ಆದದರಿಂದ, ಸಭೆಯು, ಆತ್ಮಿಕ ಇಸ್ರಾಯೇಲ, ಇಂದು ದೇವರ ಇಸ್ರಾಯೇಲ ಆಗಿರುತ್ತದೆ. ಹಳೆಯ ಇಸ್ರಾಯೇಲು ಆಯ್ಕೆ ಮಾಡಲ್ಪಟ್ಟದ್ದಾಗಿರುವಂತೆ, ನಾವು ಆಯ್ಕೆಯಾದ ಜನಾಂಗವಾಗಿದ್ದೇವೆ. ಹಳೆಯ ಒಡಂಬಡಿಕೆಯ ಸಮಯಗಳಲ್ಲಿ ಇಸ್ರಾಯೇಲು ಮಾಡಿದಂತೆ - ನಮಗೆ ಇಂದು ಯಾಜಕತ್ವವಿರುತ್ತದೆ. ಇಸ್ರಾಯೇಲು ದೇವರ ಪರಿಶುದ್ಧ ಜನಾಂಗವಾಗಿರುವಂತೆ, ಸಭೆಯು ಇಂದು ದೇವರ ಪರಿಶುದ್ಧ ಜನಾಂಗವಾಗಿದೆ. ಹಳೇ ಕಾಲದಲ್ಲಿ ದೇವರು ಇಸ್ರಾಯೇಲನ್ನು ತನ್ನ ಸ್ವಾಸ್ತ್ಯದ ಜನಾಂಗವಾಗಿರಲು ಕರೆದಂತೆ, ಇಂದು ಕ್ರೈಸ್ತ ಯುಗದಲ್ಲಿ, ದೇವರು ಕ್ರಿಸ್ತನ ಸಭೆಯನ್ನು ತಾನು ಆಯ್ದುಕೊಂಡ ಸ್ವಾಸ್ತ್ಯವಾಗಿ ತಿಳಿಯುತ್ತಾನೆ.

ಪ್ರತಿ ನವಂಬರ್ ತಿಂಗಳದ ನಾಲ್ಕನೆಯ ಗುರುವಾರವನ್ನು, ಕೃತಜ್ಞತೆಯ

ಅರ್ಪಣೆಯ ದಿನವೆಂದು ಅಮೇರಿಕನ್‌ರು ಆಚರಿಸುತ್ತಾರೆ. ಒಂದು ಪ್ರತ್ಯೇಕವಾದ ಕೃತಜ್ಞತಾಸ್ತುತಿಯ ದಿನ ಎಂದು ಆಚರಿಸಲ್ಪಡಬೇಕೆಂಬುದನ್ನು ಎಲ್ಲಿಯೂ ಹೊಸ ಒಡಂಬಡಿಕೆಯು ಆಜ್ಞಾಪಿಸಿರುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವಾಗ, ಅದು ಕೃತಜ್ಞತಾಸ್ತುತಿಯನ್ನು ಅನುದಿನದ ಅನಿಸುವಿಕೆಯಾಗಿ ಕೃತಜ್ಞತಾಸ್ತುತಿ ಮಾಡುವದನ್ನು, ಸತತವಾದ ಮನೋಭಾವನೆಯನ್ನು ಚಿತ್ರಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಕೃತಜ್ಞತಾಸ್ತುತಿ ಅರ್ಪಿಸುವುದು ಒಂದು ನೇಮಿತ ದಿನವಾಗಿರುವದಿಲ್ಲ; ಅದೊಂದು ಕ್ರಮವಾಗಿರುತ್ತದೆ. "ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ" ಇರುವವರಂತೆ (ಎಫೆಸ 5:20) ಪೌಲನು ಕ್ರೈಸ್ತರ ಗುಣಲಕ್ಷಣ ಹೇಳಿದ್ದಾನೆ. ಕ್ರೈಸ್ತರಿಗಿರುವ ಆಶೀರ್ವಾದಗಳನ್ನು ನಾವು ಯೋಚಿಸುವಾಗ, ಹೊಸ ಒಡಂಬಡಿಕೆಯು ಪ್ರತಿ ದಿನವೂ ಕೃತಜ್ಞತಾಸ್ತುತಿಯ ದಿನವಾಗಿರಬೇಕೆಂದು ಯಾಕೆ ಹೇಳಿತೆಂಬುದನ್ನು ನಾವು ಸುಲಭವಾಗಿ ನೋಡಬಹುದು "ಒಂದು ಆಯ್ದುಕೊಂಡ ಜನಾಂಗದಂತೆ," "ಒಂದು ಪರಿಶುದ್ಧ ಜನಾಂಗದಂತೆ," "ಒಂದು ರಾಜವಂಶಸ್ಥ ಯಾಜಕತ್ವದಂತೆ" ಮತ್ತು "ದೇವರ ಸ್ವಂತ ಸ್ವಾಸ್ಥ್ಯದ ಜನಾಂಗದಂತೆ," ನಾವು ಆಶೀರ್ವದಿಸಲ್ಪಟ್ಟಿದ್ದೇವೆ ಮತ್ತು ಪ್ರತೀದಿನ, "ನಿನ್ನ ಅನೇಕ ಆಶೀರ್ವಾದಗಳನ್ನು ಎಣಿಸು, ಒಂದೊಂದರ ಹೆಸರು ಹೇಳು" ಎಂದು ಹಾಡುತ್ತ ನಮ್ಮ ಮಾರ್ಗ ಕ್ರಮಿಸಬೇಕು.

ನೀನು ಕ್ರೈಸ್ತನಾಗಿರದಿದ್ದರೆ, ದೇವರು ಮನುಷ್ಯನಿಗೆ ಕೊಡುವ ಅತೀ ಉನ್ನತವಾದ ಮತ್ತು ಅತೀ ದೊಡ್ಡದಾದ ಆಶೀರ್ವಾದಗಳನ್ನು ಕಳೆದುಕೊಳ್ಳುವಿ. ದೇವರು ತನ್ನ ಸಭೆಯ ಮೇಲೆ ಅನುಗ್ರಹಿಸಿದ ಅವಕಾಶಗಳನ್ನು ನೀನು ನೋಡಿರುವಿ ಅದರ ಭಾಗವಾಗಿ ಮಾಡುವಂತೆ ದೇವರಿಗೆ ಬಿಟ್ಟು ಕೊಡುವಿಯೋ?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. "ಕಾಲವು ಪರಿಪೂರ್ಣವಾದಾಗ" ಎಂಬ ಪದದ ಸಂಕ್ಷಿಪ್ತ ವಿವರಣೆ ಕೊಡಿರಿ.
2. ಹಳೇ ಒಡಂಬಡಿಕೆಯ ಸಮಯದ ಅವಧಿಯು ಕ್ರಿಸ್ತನ ಬರೋಣಕ್ಕಾಗಿ ಹೇಗೆ ಸಿದ್ಧ ಮಾಡಿತು?
3. ಕ್ರೈಸ್ತರು ದೇವರಾದುಕೊಂಡ ಜನಾಂಗ ಎಂದು ಹೇಗೆ ಅನ್ವಯಿಸಬಹುದು?
4. ಕ್ರಿಸ್ತನೊಂದಿಗೆ ನಮ್ಮ ಅಂತಸ್ತು ದೇವರ ದಯೆಯ ಮೇಲೆ ಮತ್ತು ನಿಮ್ಮ ನಂಬಿಕೆ ಹಾಗೂ ವಿಧೇಯತೆಯ ಮೇಲೆ ಅವಲಂಬಿಸಿರುತ್ತದೆ ಇದನ್ನು ನಮ್ಮ ಅರ್ಹತೆಯ ಮೇಲೆ ಅವಲಂಭಿಸಿದ ಅಂತಸ್ತಿನೊಂದಿಗೆ ಹೋಲಿಸಿರಿ.
5. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ ಯಾಜಕತ್ವವು ಯಾವ ಪಾತ್ರ ವಹಿಸಿತು?
6. ಹಳೇ ಒಡಂಬಡಿಕೆಯ ಸಮಯಗಳಲ್ಲಿ ಯಾರು ಯಾಜಕರಾಗಿದ್ದರು?
7. "ರಾಜ ವಂಶಸ್ಥರು" ಎಂಬ ಪದವು "ಯಾಜಕತ್ವ" ಎಂಬುದರೊಂದಿಗೆ ಸಂಬಂಧಿಸಿ ಏನನ್ನು ಹೇಳುತ್ತದೆ?
8. ಯಾವ ಅರ್ಥದಲ್ಲಿ ಸಭೆಯು "ಪರಿಶುದ್ಧ ಜನಾಂಗ" ಆಗಿದೆ?
9. ಒಬ್ಬ ಕ್ರೈಸ್ತನು ಹೇಗೆ ಎರಡು ದೇಶಗಳ ನಾಗರಿಕನಾಗಿದ್ದಾನೆ ಎಂಬುದನ್ನು ವಿವರಿಸಿರಿ.
10. "ಮೀಸಲಾದ ಜನ" ಎಂಬ ವ್ಯಕ್ತಪಡಿಸುವಿಕೆಯನ್ನು ನಿರೂಪಿಸಿರಿ.
11. ಕ್ರೈಸ್ತರು ದೇವರ ವಿಶೇಷ ಜನಾಂಗವಾಗಿರುವರು ಎಂಬುದನ್ನು ನೀವು ಯೋಚಿಸುವಾಗ ಯಾವ ಆಶೀರ್ವಾದಗಳು ನಿಮ್ಮ ಮನಸ್ಸಿನಲ್ಲಿ ಬರುವವು?
12. ಇಂದು ಆತ್ಮಿಕ ಇಸ್ರಾಯೇಲನ್ನು ನಾವು ಹೇಗೆ ಪ್ರವೇಶಿಸುತ್ತೇವೆ?



© 2009 Truth for Today